ಗೋವಿಂದಪ್ಪ ಅವರ ಕೈ ಬಿಸಿ ಮಾಡ್ತಾರೆ. ಅವರು ಹೋಗ್ತಾರೆ ಅಷ್ಟೇ. ಭಟ್ರೇ ನೀವು ಇನ್ನೂ ಜೋರಾಗಬೇಕು' ಅಂದ್ರು. ಅದನ್ನು ಯೋಚಿಸಿ ಯೋಚಿಸಿ ಭಟ್ಟರು ಹಾಸಿಗೆ ಹಿಡಿದರು. ಈ ಕಡೆ ಗೋವಿಂದಪ್ಪನ ಕಿರುಕುಳ, ಇತ್ತ ಹಾಸಿಗೆ ಹಿಡಿದು ನರಳುತ್ತಿರುವ ಗಂಡನನ್ನು ನೋಡುತ್ತಾ ಸಾವಿತ್ರಮ್ಮ ಗೋಳೋ ಎಂದು ಅಳುವರು. ಅವರ ಸಹಾಯಕ್ಕೆ ಸುಬ್ರಮಣಿ, ಚೂಡಾಮಣಿ ಬಿಟ್ಟರೆ ಯಾರೂ ಇಲ್ಲವಾಯ್ತು. ಎಲ್ಲರೂ ನಮಗೂ ಆ ಜಗಳಕ್ಕೂ ಸಂಬಂಧವಿಲ್ಲದಂತೆ ಇದ್ದು ಬಿಟ್ಟರು.

ಒಂದು ದಿನ ಗೋವಿಂನದಪ್ಪನವರು ಭಟ್ಟರ ಮನೆಯ ಆಚೆ ಇರುವ ಲ್ಯಾಟ್ರಿನ್ ಇರುವ ಕಡೆ ಗಾರೆ ಕೆಲಸ ಮಾಡಲು ಸಾರ್ವೆ ಕಟ್ಟಿಸುತ್ತಿದ್ದರು. ಭಟ್ಟರು ಮತ್ತು ಸಾವಿತ್ರಮ್ಮ, 'ಸಾರ್ವೆ ಇಲ್ಲಿ ಕಟ್ಟಬೇಡಿ: ನಮಗೆ ಓಡಾಡಲು ಕಷ್ಟವಾಗುತ್ತೆ' ಎಂದು ಹೇಳಿದರೂ ಅವರ ಮಾತನ್ನು ಗಮನಕ್ಕೆ ತಂದು ಕೊಳ್ಳದೇ ಸಾರ್ವೆ ಹಾಕಿಸಿಯೇ ಬಿಟ್ಟರು. ತಮ್ಮ ಅನುಮತಿಯು ಕೇಳದೇ, ತಮ್ಮ ಮನೆ ಅಂಗಳಕ್ಕೆ ಬಂದು ನಮಗೆ ಲ್ಯಾಟ್ರಿನ್ನಿಗೆ ಹೋಗಲು ಜಾಗ ಬಿಡದೇ ಸಾರ್ವೆ ಕಟ್ಟಿದ್ದು ಭಟ್ಟರಿಗೆ ಸಹಿಸಲಾಗಲಿಲ್ಲ. ಅವರಿಗೆ ಕೋಪ ಬಂದು, ಒಂದೊಂದೇ ಗಳವನ್ನು ಕಿತ್ತು ಹಾಕಿದಾಗ, ಇದನ್ನು ನೋಡುತ್ತಿದ್ದಂತೆ ಗೋವಿಂದಪ್ಪ ಬಂದು, 'ಏನ್ ಭಟ್ರೇ....... ಜಾಸ್ತಿ ಆಯ್ತು ನಿಮ್ದು! ನಾನು ನಿಮ್ಮ ಮೇಲೆ ಕಂಪ್ಲೆಂಟ್ ಕೊಡ್ಬೇಕು. ನಾವು ಮನೆ ಕಟ್ತಾ ಇದೀವಿ ನಮಗೆ ಮನೆ ಕಟ್ಟಲು ಪಕ್ಕದವರು ಸಹಕಾರ ನೀಡುತ್ತಿಲ್ಲಾ! ನಮಗೆ ಇದರಿಂದ ತೊಂದರೆ ಆಗಿದೆ ಅಂತ ಕಂಪ್ಲೆಂಟ್ ಕೊಡ್ತೀನಿ' ಅಂದಾಗ, ಇದನ್ನೆಲ್ಲಾ ನೋಡುತ್ತಿದ್ದ ಸುಬ್ರಮಣಿ ಬಂದು, 'ಗೋವಿಂದಪ್ಪ ಇದಕ್ಕೆಲ್ಲಾ ಕಂಪ್ಲೆಂಟ್ ಯಾಕೆ ಕೊಡ್ತೀರಾ?' ಅಂದು ಭಟ್ರ ಕಡೆ ತಿರುಗಿ, 'ನಿಮಗೆ ಲ್ಯಾಟ್ರಿನ್ನಿನ ಕಡೆ ಹೋಗಲು ಜಾಗ ಬೇಕು. ನಿಮಗೆ ಹೋಗಕ್ಕೆ ಬರೋದಿಕ್ಕೆ ಸ್ವಲ್ಪ ಜಾಗ ಬಿಟ್ಟು ಸಾರ್ವೆ ಕಟ್ಟಿದ್ರಾಯ್ತಲ್ಲಾ!' ಅಂದು ಗೋವಿಂದಪ್ಪ, 'ಪಾಪ ಅವರಿಗೆ ಓಡಾಡಲು ಸ್ವಲ್ಪ ಜಾಗ ಬಿಟ್ಟು ಸಾರ್ವೆ ಕಟ್ಟಿ' ಎಂದರು. ಭಟ್ಟರಿಗೆ ಓಡಾಡಲು ಜಾಗ ಬಿಟ್ಟು ಸ್ವಲ್ಪ ಪಕ್ಕಕ್ಕೆ ಸಾರ್ವೆ ಹಾಕಿಸಿದರು. ಒಟ್ಟಿನಲ್ಲಿ ಸುಬ್ರಮಣಿ ಇಬ್ಬರನ್ನೂ ಸಮಾಧಾನ ಮಾಡಿದರು. ಇದೇ ಸಂಧರ್ಭದಲ್ಲಿ ಸಾವಿತ್ರಮ್ಮ ತನ್ನ ಗಂಡ ಖಾಯಿಲೆಯಿಂದ ನರಳುತ್ತಿರುವುದನ್ನೂ ಗೋವಿಂದಪ್ಪ ಕೊಡುತ್ತಿರುವ ಕಿರುಕುಳದಿಂದ ಅವರು ಮನಸ್ಸು ಕೆಡೆಸಿ ಕೊಂಡಿರುವುದನ್ನೂ ಸುಬ್ರಮಣಿಯವರ ಹತ್ತಿರ ಹೇಳಿಕೊಂಡರು.

ಆಗ ಸುಬ್ರಮಣಿ ಅದಕ್ಕೊಂದು ಪರಿಹಾರ ಸೂಚಿಸಿದರು. 'ನಿಮಗೆ ವಯಸ್ಸಾದ ಕಾಲದಲ್ಲಿ ಮಗಳು ಅಳಿಯ ಹತ್ತಿರವಿಲ್ಲ. ಈ ಗೋವಿಂದಪ್ಪ ಸಾಮಾನ್ಯನಲ್ಲ. ನೋಡಿ ನೀವು ಮಡಿಮೈಲಿಗೆ, ಆಚಾರ ವಿಚಾರ, ಆಚರಿಸುವವರು ಅಂತಾ ಗೊತ್ತಿದ್ದೂ, ನಿಮ್ಮ ಮನೆ ಅಂಗಳಕ್ಕೆ ಎಂಜಲು ಮುಸುರೆ, ಕೋಳಿ ಮೊಟ್ಟೆ ಎಲ್ಲಾ ಹಾಕಿ ನಿಮ್ಮ ಮಡಿ ಕೆಡಿಸ್ತಾರೆ. ಸುಮ್ನೆ ಇಲ್ಲಿದ್ದುಕೊಂಡು ಮನಸ್ಸಿನ ನೆಮ್ಮದಿನೂ ಕೆಡಿಸಿಕೊಂಡು, ಆರೋಗ್ಯ ಹಾಳು ಮಾಡಿಕೊಂಡು ಇರೋ ಬದಲು ಈ ಮನೆ ಮಾರಿ, ಅದೇ ದುಡ್ಡಿಗೆ ಒಂದು ಫ್ಲಾಟ್ ತೆಗೆದುಕೊಂಡರೆ ಒಳ್ಳೆಯದು ಅನ್ಸುತ್ತೆ. ನಾನು ಯಾಕೆ ಈ ಮಾತು ಹೇಳ್ತಿದಿನೀ ಅಂದ್ರೇ ನೀವಿಬ್ರೇ ಇರೋದರಿಂದ ನೀವು ಫ್ಲಾಟ್ ತಗೊಂಡ್ರೆ ನಿಮಗೆ ಅಲ್ಲಿ ಸೇಫ್ಟಿ ಇರುತ್ತೆ. ಅಲ್ಲಿ ಈ ಥರ ಅಕ್ಕಾಪಕ್ಕಾ ಜಗಳ ಇರೋದಿಲ್ಲ. ಜೊತೆಗೆ ಒಳ್ಳೆ ವಾತಾವರಣ ಇದ್ರೆ ರಾಮಭಟ್ಟರ ಆರೋಗ್ಯ ಸುಧಾರಿಸುತ್ತೆ. ಯಾವುದಕ್ಕೂ ನಿಮ್ಮ ಮಗಳನ್ನೂ ವಿಚಾರಿಸಿ. ಮುಂದಿನದ್ದನ್ನು ನಾನು ನೋಡ್ಕೋತೀನಿ' ಅಂದ್ರು.

ರಾಮಭಟ್ಟರಿಗೆ ಮನೆ ಮಾರುವ ವಿಚಾರ ಅಷ್ಟು ಇಷ್ಟವಾಗದಿದ್ರೂ, ಸಾವಿತ್ರಮ್ಮನವರಿಗೆ ಈ ಸಲಹೆ ಇಷ್ಟವಾಯ್ತು. ಹೇಗಾದ್ರೂ ಸರಿ ನನ್ನ ಗಂಡ ಮೊದಲಿನಂತಾದರೆ ಸಾಕು ಅಂದು ಈ ವಿಚಾರವಾಗಿ ಮಗಳ ಹತ್ತಿರ ಮಾತಾಡಿದಾಗ, ಮಗಳು, 'ಅಪ್ಪನ ಆರೋಗ್ಯಕ್ಕಿಂತ ಮನೆ ಹೆಚ್ಚಾ ಅಮ್ಮಾ, ಸುಬ್ರಮಣಿ ಅಂಕಲ್ ಹೇಳಿದ ಹಾಗೆ ಮನೆ ಮಾರಿ ಫ್ಲಾಟ್ ತಗೊಳ್ಳಿ ನಿಮಗೆ ನೆಮ್ಮದಿನೂ ಸಿಗುತ್ತೆ. ಈ ವಿಚಾರವಾಗಿ ನಾನೇ ಅಂಕಲ್ ಹತ್ರ ಮಾತಾಡ್ತೀನಿ' ಅಂದ್ಲು.

ಒಟ್ಟಿನಲ್ಲಿ ಎಲ್ರೂ ಸೇರಿ ಮನೆ ಮಾರುವುದೆಂದು ತೀರ್ಮಾನಿಸಿದಾಗ, ಭಟ್ರು ಒಲ್ಲದ ಮನಸ್ಸಿನಿಂದ ಹೆಂಡತಿಯ ಬಲವಂತಕ್ಕೆ ಒಪ್ಪಿಗೆ ಕೊಟ್ರು. ಆದ್ರೂ ಭಟ್ಟರಿಗೆ ಸಮಾಧಾನವಿಲ್ಲ. ಮನೆಯಲ್ಲಿ ಭಟ್ರು ಸಾಲಿಗ್ರಾಮಕ್ಕೆ ದಿನನಿತ್ಯ ಪೂಜೆ ನೈವೇದ್ಯ ಮತ್ತೆ ರುದ್ರಾಭಿಷೇಕ ಮಾಡುತ್ತಿದ್ದ ಅವರಿಗೆ ಬೇರೆ ಇತರೆ ಜನಕ್ಕೆ ಮನೆ ಮಾರುವುದು ಇಷ್ಟವಾಗಲಿಲ್ಲ. ಹಾಗಾಗಿ ಈ ಮನೆ ಬ್ರಾಹ್ಮಣರಿಗೇ ಮಾರಬೇಕೆಂದು ಭಟ್ಟರು ಅಭಿಪ್ರಾಯಪಟ್ಟರು. ಅದನ್ನರಿತ ಸುಬ್ರಮಣಿ ಅಂಥವರನ್ನೇ ಹುಡುಕಿದರು. ಆಗ ಭಟ್ಟರ ಶಿಷ್ಯನೇ ಆದ ರಘುರಾಂ ಆಚಾರ್ಯ ಮನೆ ಕೊಳ್ಳಲು ಮುಂದೆ ಬಂದಾಗ, ಭಟ್ಟರು ಮಾರಲು ಸಂಕಟಪಟ್ಟರೂ ಒಬ್ಬ ಬ್ರಾಹ್ಮಣ ಕೊಳ್ಳುವನೆಂದು ಸಮಾಧಾನ ಪಟ್ಟರು.

ಮನೆ ಮಾರುವ, ಫ್ಲಾಟ್ ಕೊಳ್ಳುವ ಎಲ್ಲಾ ವ್ಯವಹಾರವನ್ನೂ ಸುಬ್ರಮಣಿಯವರೇ ನೋಡಿಕೊಂಡರು. ಭಟ್ಟರಿಗೆ ಅನ್ಯಾಯವಾಗಲು ಬಿಡಲಿಲ್ಲ. ಮನೆ ಮಾರಿದ ದಿನ ಭಟ್ಟರು ಮಗುವಿನಂತೆ ಅತ್ತುಬಿಟ್ಟರು. ಶಿಷ್ಯ ರಘುರಾಂ ಭಟ್ಟರಿಗೆ, 'ಭಟ್ರೇ ನೀವೇನೂ ಯೋಚ್ನೆ ಮಾಡ್ಬೇಡಿ. ಹಳೆಮನೆ ಇದು ಕೆಡವಿ ಕಟ್ಟಿಸ್ತೀನಿ. ಆದರೆ ನೀವು ಪೂಜೆ ಮಾಡುತ್ತಿದ್ದ ದೇವರ ಮನೇ ಜಾಗದಲ್ಲೇ ದೇವರ ಮನೆ ಕಟ್ಟಿಸ್ತೀನಿ. ದೇವರ ಪೂಜೆ ಎಲ್ಲಾ ತಪ್ಪದೇ ಮಾಡ್ತೀನಿ. ನೀವು ಅಷ್ಟೇ; ನಿಮಗೆ ಈ ಮನೆ ನೋಡ್ಬೇಕೂಂತ ಅನ್ನಿಸಿದಾಗಲೆಲ್ಲಾ ನೀವಿಬ್ರು ಯಾವಾಗ ಬೇಕಾದ್ರೂ ಬರಬಹುದು. ಈ ಮನೆಗೂ ನಿಮಗೂ ಇರುವ ನಂಟು ನಂಗೆ ಚೆನ್ನಾಗಿ ಗೊತ್ತು' ಎಂದು ಸಮಾಧಾನದ ಮಾತು ಆಡಿದ. ಭಟ್ಟರು ಅಂತೂ ಮನೆ ಮಾರಿ, ಅವರು ಕೊಂಡ ಫ್ಲಾಟಿಗೆ ಹೋದರು. ಮನೆ ಬಿಡಬೇಕಾದರೆ, ಖಾಲಿ ಮನೆ ಬಿಟ್ಟು ಹೋಗಬಾರದೆಂದು, ದೇವರ ಮನೆಯಲ್ಲಿ ಶ್ರೀ ರಾಘವೇಂದ್ರರಾಯರ ಬೆಳ್ಳಿಪಾದ, ಅರಿಶಿಣ ಕುಂಕುಮ, ಅಕ್ಕಿ ಬೆಲ್ಲ ಎಲ್ಲಾ ಇಟ್ಟು, ಗುರುರಾಯರ ಪಾದವನ್ನು ಇನೊಂದು ದಿನ ಬಂದು ತೆಗೆದುಕೊಂಡು ಹೋಗುವುದಾಗಿ ಹೇಳಿ, ಮನೆ ಮೂಲೆ, ಮೂಲೆಯನ್ನೂ ನೋಡುತ್ತ ಭಟ್ಟರು ಕಣ್ಣಲ್ಲಿ ನೀರು ತುಂಬಿಕೊಂಡು ಮನೆಯಿಂದ ಆಚೆ ಹೋದರು.

ಹೊಸ ಫ್ಲಾಟಿಗೆ ಹೋದ ಭಟ್ಟರಿಗೆ ಏನೋ ಕಳೆದುಕೊಂಡ ಅನುಭವ. ಹೊಟ್ಟೆಯಲ್ಲಿ ವಿಚಿತ್ರವಾದ ಸಂಕಟ. ಎರಡು ದಿನ ಹೀಗೆ ಕಳೆದ ಭಟ್ಟರಿಗೆ, ಮೂರನೇ ದಿನ ಫ್ಲಾಟಿನಲ್ಲಿ ಇರೋದಿಕ್ಕಾಗದೇ, ಸಾವಿತ್ರಮ್ಮನನ್ನೂ ಕರ್ಕೊಂಡು ತಾವು ಮಾರಿದ ಮನೆಗೆ ಬಂದರು. ಮನೆ ಬಾಗಿಲು ತೆರೆದಿತ್ತು. ಭಟ್ರು ಒಳಗೆ ಹೋದವರೇ ದೇವರ ಮನೆಯಲ್ಲಿ ಅಳುತ್ತಾ ಕುಳಿತುಬಿಟ್ಟರು. ಸಾವಿತ್ರಮ್ಮ ಗಂಡನ ಪಕ್ಕದಲ್ಲೇ ಕುಳಿತು ಅವರನ್ನು ಸಮಾಧಾನ ಮಾಡುತ್ತಿದ್ದರು. ಇವರು ಬಂದಿದ್ದನ್ನು ಯಾರೂ ಗಮನಿಸಲಿಲ್ಲವಾಗಿ, ಅತ್ತ ಗೋವಿಂದಪ್ಪ ಸುಬ್ರಮಣಿಯವರ ಹತ್ತಿರ, 'ಅಂತು ಸುಬ್ರಮಣಿಯವರೆ ನೀವು ಅಂದುಕೊಂಡ ಹಾಗೆ ಈ ಮನೆ ಕೊಂಡುಕೊಂಡೇ ಬಿಟ್ರಿ. ಹೂಂ. ಆದ್ರೂ ತುಂಬ ಸಾಹಸ ಮಾಡಬೇಕಾಯ್ತು. ಆ ಭಟ್ಟ ಮನೆ ಮಾರೋದಕ್ಕೆ ಇಷ್ಟನೇ ಪಟ್ಟಿರಲಿಲ್ಲ. ಕೊನೆಗೆ ನಿಮ್ಮನೆ ಕಾರಣ ತಗೊಂಡು ಜಗಳ ಶುರು ಮಾಡಿಸಿದೆ. ಅವರ ಮಗಳಿಗೆ ಇರೋದು ಇಲ್ಲದ್ದು ಎಲ್ಲಾ ಸೇರ್ಸಿ ಹೇಳ್ದೆ ನೋಡಿ, ಮಗಳು ಹೆದರಿಕೊಂಡು ಮನೆ ಮಾರಿ ಅಂತ ಹೇಳಿದ ಮೇಲೆ ಕೊನೆಗೆ ಅಂತು ಭಟ್ಟ ಮನೆ ಮಾರೋದಕ್ಕೆ ಒಪ್ಪಿದ್ದು. ಅದ್ಸರಿ ಸುಬ್ರಮಣಿಯವರೆ, ಆ ರಘುರಾಂ ಗೆ ಎಷ್ಟು ಕೊಟ್ರಿ? ಅವನು ಭಟ್ರ ಹತ್ರ ತಗೊಂಡು ನನಗೆ ರಿಜಿಸ್ಟ್ರೇಷನ್ ಮಾಡ್ಸಿ ಕೊಡೋದಿಕ್ಕೆ ಐದು ಲಕ್ಷ ಇಸ್ಕೊಂಡ. ನಂಗೆ ದುಡ್ಡು ಹೋದರು ಪರವಾಗಿಲ್ಲ. ನಂಗೆ ಇದೇ ಜಾಗನೇ ಬೇಕಿತ್ತು. ಹಾಗಾಗಿ ಭಟ್ಟರ ಹತ್ರ ನಿಮ್ಮನ್ನ ದೂರ ಬೇಕಾಯ್ತು. ಪರವಾಗಿಲ್ಲ ಬಿಡಿ. ನೀವು ನಮಗೋಸ್ಕರ ಊರಲ್ಲಿರೋ ಜಮೀನು, ಮನೆ, ನಮ್ಮ ಕೈ ತಪ್ಪಿ ಹೋಗ್ತಿದೆ ಅಂದಾಗ, ನೀವು ಬಂದು ಸಹಾಯ ಮಾಡಿ ಎಲ್ಲಾ ಉಳಿಸಿಕೊಟ್ರಿ. ಅದನ್ನ ನಾವು ಮರೆಯೋಕೆ ಆಗುತ್ತಾ? ಇದರಿಂದ ನಮಗೂ ಒಳ್ಳೆ ಮಜ ಸಿಕ್ತು. ನಿಮಗೆ ಸೈಟು ಸಿಕ್ತು. ಯಾವಾಗ ಕೆಲ್ಸ ಶುರು ಮಾಡ್ತಿರಾ?'

ಈ ಮಾತೆಲ್ಲಾ ಕೇಳಿಸಿಕೊಂಡ ಭಟ್ಟರು ಗರ ಬಡಿದ ಹಾಗೆ ಕುಳಿತು ಬಿಟ್ಟರು. ಸಾವಿತ್ರಮ್ಮ ಗಂಡನಲ್ಲಾದ ಬದಲಾವಣೆ ಗಮನಿಸಿ, 'ಅಯ್ಯೋ, ಏನಾಯ್ತು ಅಂದ್ರೇ...?' ಜೋರಾಗಿ ಕೂಗಿಕೊಂಡಾಗ 'ಸಾವಿತ್ರಿ, ನಾವು ಮೋಸ ಹೋದ್ವಿ ಕಣೇ..! ನಮಗೆ ಎಲ್ರೂ ಸೇರಿ ಮೋಸ ಮಾಡಿದ್ರು. ನನ್ನ ಮನೆ ಯಾರದೋ ಪಾಲಾಯ್ತು. ನನ್ನ ಜಪ ತಪ, ಪೂಜೆ ಎಲ್ಲ ಹೋಯ್ತು' ಎನ್ನುತ್ತ ಭಟ್ರು ಕೆಳಗೆ ಉರುಳಿ ಬಿಟ್ಟರು. ತಕ್ಷಣ ಅವರ ಪ್ರಾಣಪಕ್ಷಿ ಹಾರಿಹೋಯ್ತು. ಸಾವಿತ್ರಮ್ಮನ ಅಳು ಮುಗಿಲು ಮುಟ್ಟಿತು. ಅವರಿಗಾದ ಮೋಸ ಯಾರಿಗೂ ಕಾಣಿಸದೇ ಹೋಯ್ತು.